**ಸಿ.ಸಿ. ನಂ. 534/2017**

**ಸಾಕ್ಷಿಃ ಸಿ.ಡಬ್ಲ್ಯೂಃ 6, ಪಿ.ಡಬ್ಲ್ಯೂಃ 3**

ಸಾಕ್ಷಿದಾರನ ಹೆಸರು : ಕೆ ಗಂಗಾಧರ

ತಂದೆಯ ಹೆಸರು : ಕರಿಗೌಡ

ವಯಸ್ಸು : 69 ವರ್ಷ

ಉದ್ಯೋಗ : ನಿವೃತ್ತ ಅಬಕಾರಿ ಉಪನಿರೀಕ್ಷಕ,

ವಾಸಸ್ಥಳ : ಹಾಸನ

**ಸತ್ಯ ಪ್ರತಿಜ್ಞೆಯ ಮೇರೆಗೆ, ತಾಃ 18.05.2026.**

**ಮುಖ್ಯ ವಿಚಾರಣೆಃ** ಎಪಿಪಿಯವರಿಂದ,

ನಾನು ಹಾಸನ ಉಪವಿಭಾಗದಲ್ಲಿ ಜನವರಿ 2016 ಡಿಸೆಂಬರ್ 2016 ರವರೆಗೆ ಪ್ರಭಾರ ಅಬಕಾರಿ ಉಪನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಅಬಕಾರಿ ಅಧೀಕ್ಷಕರ ಮೌಖಿಕ ಆದೇಶದಂತೆ ದಿಃ 23.04.2016 ರಂದು ಬೇಲೂರು ತಾಲ್ಲೂಕಿಗೆ ಬಂದು ಸಿಬ್ಬಂದಿಯೊಂದಿಗೆ ದಾವಿಗಾಗಿ ಗಸ್ತು ತಿರುಗುತ್ತಿದ್ದಾಗ, ಬೇಲೂರು ತಾ, ಬಿಕ್ಕೋಡು ಹೋ, ಮಲ್ಲಿಗನೂರಿನಲ್ಲಿ ಅಕ್ರಮ ಕಳ್ಳಭಟ್ಟಿ ಸಾರಾಯಿಯನ್ನು ತಯಾರಿಸಿ ಮಾರಾಟ ಮಾಡುತ್ತಿದ್ದಾರೆ ಎಂಬ ಮಾಹಿತಿ ಬಂದಿರುತ್ತದೆ. ಮಲ್ಲಿಗನೂರು ಗ್ರಾಮಕ್ಕೆ ಹೋಗಿ ಇಬ್ಬರು ಪಂಚರನ್ನು ಕರೆದು ಮಾಹಿತಿ ತಿಳಿಸಿ, ಆರೋಪಿ ರಘು ಎಂಬುವವನು ಕಳ್ಳಭಟ್ಟಿ ಸಾರಾಯಿ ತಯಾರಿಸಿ ಮಾರಾಟ ಮಾಡುತ್ತಿರುವ ಬಗ್ಗೆ ಪಂಚರಿಗೆ ತಿಳಿಸಿ ಅವರೊಂದಿಗೆ ಆರೋಪಿಯ ಮನೆಯ ಹತ್ತಿರ ಹೋಗಿರುತ್ತೇವೆ. ಮನೆಯನ್ನು ಶೋಧಿಸಲಾಗಿ ಕಳ್ಳಭಟ್ಟಿ ತಯಾರಿಸಲು ಬೇಕಾಗಿರುವ ಯೋಗ್ಯವಾಗಿರುವ ಪ್ಲಾಸ್ಟಿಕ್ ಕೊಡದಲ್ಲಿ 15ಲೀ ನಂತೆ ಒಟ್ಟು 45ಲೀ ಬೆಲ್ಲದ ಕೊಳೆ ಹಾಗೂ 2ಲೀ ಕಳ್ಳಭಟ್ಟಿ ಸಾರಾಯಿ ಇರುವುದು ಕಂಡುಬಂದಿರುತ್ತದೆ. ಅದನ್ನು ಹೊಂದಲು ಯಾವುದೇ ಅನುಮತಿ ಇಲ್ಲದ ಕಾರಣ, ನಂತರ ಮುಂದಿನ ಕ್ರಮಕ್ಕಾಗಿ 3 ಕೊಡಗಳಿಂದ ಬೆಲ್ಲದಕೊಳೆಯಿಂದ 500 ಎಂ.ಎಲ್ ನ ನಷ್ಟು ಮತ್ತು 500 ಎಂ.ಎಲ್ ಕಳ್ಳಭಟ್ಟಿ ಸಾರಾಯಿಯನ್ನು ಒಂದು ಪ್ಲಾಸ್ಟಿಕ್ ಬಾಟಲಿಯಲ್ಲಿ ತೆಗೆದು, ಬಾಟಲಿಗೆ ಬಟ್ಟೆ ಕಟ್ಟಿ ಇಲಾಖಾ ಸೀಲ್ ನಿಂದ ಸೀಲ್ ಮಾಡಿ ಆರೋಪಿಯ ವಿಳಾಸ ಹಾಗೂ ಅಪರಾಧ

ಸಂಖ್ಯೆ ಇರುವ ಚೀಟಿಯನ್ನು ಸದರಿ ಮಾದರಿಗಳಿಗೆ ಪಂಚರ ಸಹಿ ಪಡೆದು ಅಂಟಿಸಿರುತ್ತೇವೆ. ಕೃತ್ಯ ಸ್ಥಳದಲ್ಲಿ ಮಹಜರನ್ನು 1.00–1.45 ರವರೆಗೆ ಬರೆದು ಪಂಚರ ಸಹಿಯನ್ನು ಪಡೆದಿರುತ್ತೇವೆ. ಆರೋಪಿಯನ್ನು ದಸ್ತಗಿರಿ ಮಾಡಿ ದೊರೆತ ವಸ್ತುಗಳನ್ನು ತೆಗೆದುಕೊಂಡು ಕಚೇರಿಗೆ ಬಂದು ಪ್ರ.ವ ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇವೆ. ಶೋಧನೆ ಮಾಡಲು ಶೋಧನಾ ಪತ್ರವನ್ನು ತಯಾರಿಸಿರುತ್ತೇವೆ.

ಸಾಕ್ಷಿ ನಿಪಿ–1 ರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಸಹಿಯನ್ನು ನಿಪಿ–1(ಸಿ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ–2 ರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಸಹಿಯನ್ನು ನಿಪಿ–2(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಶೋಧನಾ ವಾರೆಂಟನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–3 ಎಂದು ಸಹಿಯನ್ನು ನಿಪಿ–3ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರ.ವ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–4 ಎಂದು, ಸಾಕ್ಷಿಯ ಸಹಿಯನ್ನು ನಿಪಿ–4ಎ ಎಂದು ಗುರುತಿಸಲಾಯಿತು. ಸಾಕ್ಷಿಯು ರಾಸಾಯನಿಕ ಪರೀಕ್ಷೆಗಾಗಿ ತೆಗೆದ 4 ಪ್ಲಾಸ್ಟಿಕ್ ಬಾಟಲ್ ಗಳನ್ನು ನೋಡಿ ಗುರ್ತಿಸಿದ್ದು ಅವುಗಳನ್ನು ಮುಮಾ–1 ರಿಂದ 4 ಎಂದು ಗುರ್ತಿಸಲಾಯಿತು. ಆರೋಪಿಯನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಅಬಕಾರಿ ನಿರೀಕ್ಷಕರಾದ ಕುಮಾರಸ್ವಾಮಿ ರವರಿಗೆ ಹಸ್ತಾಂತರಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಸಿ ಎಂ ಸಿ ವಕೀಲರಿಂದ**

ನ್ಯಾಯಾಲಯದ ಮುಂದಿರುವ ಬಾಟಲ್ ಗಳನ್ನು ನಮ್ಮ ಕಚೇರಿಯಿಂದ ತೆಗೆದುಕೊಂಡು ಹೋಗಿರುತ್ತೇವೆ. 2ಲೀ ಕಳ್ಳಭಟ್ಟಿ ಸಾರಾಯಿ ಇದ್ದ ಬಗ್ಗೆ ನ್ಯಾಯಾಲಯದ ಮುಂದೆ ದಾಖಲೆ ಇರುವುದಿಲ್ಲ. 3 ಕೊಡಗಳು ನ್ಯಾಯಾಲಯದ ಮುಂದೆ ಇರುವುದಿಲ್ಲ. ಸ್ಥಳದಲ್ಲಿ ಶೋಧನಾ ವಾರೆಂಟನ್ನು 12.45 ಕ್ಕೆ ತಯಾರಿಸಿರುತ್ತೇನೆ. ಶೋಧನಾ ವಾರೆಂಟನ್ನು ತಯಾರಿಸಿ ಬಂದು ನಾನೇ ಮನೆಯನ್ನು ಪ್ರವೇಶಿಸಿರುತ್ತೇನೆ. ನಿಪಿ–3 ರಲ್ಲಿ ವಾರೆಂಟ್ ಇಲ್ಲದೇ ಮನೆಯನ್ನು ತೋಧನೆ ಮಾಡಿದ ಬಗ್ಗೆ ವರದಿಯನ್ನು ನಮೂದಿಸಿರುತ್ತೇವೆ. ಶೋಧನೆ ಮಾಡಲು ನ್ಯಾಯಾಲಯದಿಂದ ಅನುಮತಿ ಪಡೆದುಕೊಂಡಿರಲಿಲ್ಲ. ಮಹಜರ್ ನಲ್ಲಿ 12.30 ಗಂಟೆಗೆ ಶೋಧನೆ ಮಾಡಿರುತ್ತೇವೆ ಎಂದು ಬರೆದಿರುತ್ತೇನೆ.

ಆರೋಪಿ ವಸ್ತುಗಳನ್ನು ಮನೆಯಿಂದ ಹೊರಗೆ ತಂದುಕೊಟ್ಟಿರುತ್ತಾರೆ. ಈ ಬಗ್ಗೆ ಮಹಜರ್ ನಲ್ಲಿ ಬರೆದಿಲ್ಲ. ವಸ್ತುಗಳು ಇದ್ದ ಸ್ಥಳದಲ್ಲಿ ಮಹಜರ್ ಮಾಡಿರುವುದಿಲ್ಲ. ಬಾಟಲ್ ಗಳಿಗೆ ನಂಬರ್ ಗಳನ್ನು

ಕೊಟ್ಟಿರುತ್ತೇವೆ. ಆದರೆ ಮಹಜರಿನಲ್ಲಿ ಆ ಬಗ್ಗೆ ನಮೂದಿಸಿರುವುದಿಲ್ಲ. ಮಹಜರ್ ನಲ್ಲಿ ಮನೆಯ ಆಕಾರ, ಸ್ವರೂಪ ಮತ್ತು ವಿಸ್ತೀರ್ಣವನ್ನು ಬರೆದಿರುವುದಿಲ್ಲ. ಮನೆಯ ಬಾಗಿಲು ಪೂರ್ವ ಭಾಗಕ್ಕೆ ಇತ್ತು. ಮಹಜರ್ ನಲ್ಲಿ ಪಶ್ಚಿಮ ದಿಕ್ಕಿನಲ್ಲಿ ಆರೋಪಿಯ ಕಾಫಿತೋಟ ಇರುತ್ತದೆ ಎಂದು ಬರೆದಿರುತ್ತೇವೆ. ಈ ಬಗ್ಗೆ ಮಹಜರ್ ನಲ್ಲಿ ಪಶ್ಚಿಮ ದಿಕ್ಕಿನಲ್ಲಿ ಕಾಫಿತೋಟ ಇರುವ ಬಗ್ಗೆ ನಮೂದಿಸಿಲ್ಲ. ಎಫ್ ಐ ಆರ್ ನಲ್ಲಿ ಸಮಯವನ್ನು 12.30 ಎಂದು ಬರೆದಿರುತ್ತೇನೆ. ಮಹಜರ್ ಮಾಡುವ ಕಾಲಕ್ಕೆ ಪ್ರ.ವ ವರದಿ ದಾಖಲಾಗಿರುವುದಿಲ್ಲ. ಪಂಚರಿಗೆ ನೋಟೀಸ್ ಕೊಟ್ಟಿರುವುದಿಲ್ಲ.

ದಿಃ 23.04.2016 ರಂದು ಮೇಲಾಧಿಕಾರಿಗಳ ಆದೇಶದ ಮೇರೆಗೆ ಬೇಲೂರು ತಾ, ಬಿಕ್ಕೋಡು ಹೋ, ಮಲ್ಲಿಗನೂರು ಗ್ರಾಮಕ್ಕೆ ಭೇಟಿ ನೀಡಿ ಆರೋಪಿಯ ಮನೆಯನ್ನು ಶೋಧನೆ ಮಾಡಿ ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ದೊರೆತ ವಸ್ತುಗಳಿಂದ ಯಾವುದೇ ಮಾದರಿಯನ್ನು ತೆಗೆದು ಯಾವುದೇ ಚೀಟಿಯನ್ನು ಅಂಟಿಸಿರುವುದಿಲ್ಲ ಎಂದರೆ ಸರಿಯಲ್ಲ. ಮಲ್ಲಿಗನೂರು ಗ್ರಾಮದಲ್ಲಿ ಆರೋಪಿಗೆ ಸೇರಿದ ಯಾವುದೇ ಮನೆ ಇಲ್ಲ ಎಂದರೆ ಸರಿಯಲ್ಲ. ಆರೋಪಿ ಮತ್ತು ವಸ್ತುಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿಯನ್ನು ಮಲ್ಲಿಗನೂರು ಗ್ರಾಮದಲ್ಲಿ ದಸ್ತಗಿರಿ ಮಾಡಿಲ್ಲ ಎಂದರೆ ಸರಿಯಲ್ಲ. ಬೆಲ್ಲದಕೊಳೆ ಮತ್ತು ಕಳ್ಳಭಟ್ಟಿ ಸಾರಾಯಿಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮಹಜರನ್ನು ಕಚೇರಿಯಲ್ಲಿ ಕುಳಿತು ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ಇಲಾಖಾ ಅಂಕಿ ಅಂಶದ ಸಲುವಾಗಿ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾ.ದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಅದೆ.

(ನಾಗೇಂದ್ರ)
ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ. ನ್ಯಾಯಾಲಯ ಬೇಲೂರು